ಮೈಸೂರಿನ ಎ.ಪಿ.ಎಂ.ಸಿ. ಸ್ಥಳಾಂತರ

707 (1102) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಹೊರವಲಯದ ಬಂಡೀಪಾಳ್ಯದಲ್ಲಿನ ಎಪಿಎಂಸಿಗೆ ಸಂತೆಪೇಟೆಯನ್ನು ಯಾವಾಗ ಸ್ಥಳಾಂತರಿಸಲಾಗುವುದು?

ಆ) ಸ್ಥಳಾಂತರಿಸಲು ಇರುವ ಅಡಚಣೆ ಏನು?

ಇ) ಇಲ್ಲಿನ ಕುಂದುಕೊರತೆಗಳ ನಿವಾರಣೆಗೆ ಕೈಗೊಂಡಿರುವ ಕ್ರಮಗಳು ಏನು?

ಈ) ಕುಂದುಕೊರತೆ ಕುರಿತಾಗಿ ವಿವಿಧ ಸಂಘ ಸಂಸ್ಥೆಗಳು ಮಾಡಿರುವ ಆರೋಪವನ್ನು ಸರಿಪಡಿಸಲು ಏನು ಕ್ರಮ ವಹಿಸಲಾಗಿದೆ?

ಉ) ಈ ಸ್ಥಳಾಂತರಕ್ಕೆ ಆಗಿರುವ ವಿಳಂಬವನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :

ಅ) ದಿನಾಂಕ: 25-3-2002ರಿಂದ ಹಳೇ ಸಂತೆಪೇಟೆಯಲ್ಲಿನ ಈರುಳ್ಳಿ, ಆಲೂಗೆಡ್ಡೆ, ಬೆಳ್ಳುಳ್ಳಿ, ಮತ್ತು ಸ್ವಲ್ಪ ಪ್ರಮಾಣದಲ್ಲಿ ಅಕ್ಕಿ, ಬೇಳೆ, ವ್ಯಾಪಾರ ವಹಿವಾಟು ಸ್ಥಳಾಂತರಗೊಂಡಿರುತ್ತದೆ. ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನ ಪಡೆದಿರುವ ಕೆಲವು ಪೇಟೆ ಕಾರ್ಯಕರ್ತರು ಗೋದಾಮುಗಳನ್ನು ನಿರ್ಮಿಸದೇ ಇರುವುದರಿಂದ ನಿರ್ಮಾಣಕ್ಕಾಗಿ ಹೆಚ್ಚುವರಿ 6 ತಿಂಗಳ ಕಾಲಾವಕಾಶ ನೀಡಿದೆ.

ಆ) ಮೇಲಿನಂತೆ

ಇ) ಪ್ರಾಂಗಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಹಾಲಿ ಇರುವ ಸೌಲಭ್ಯಗಳನ್ನು ನಿರ್ವಹಿಸಲು ಹಾಗೂ ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸಲು ಅಂದಾಜು 4 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ ರೂಪಿಸಲಾಗಿದೆ. ಆದಷ್ಟು ಶೀಘ್ರದಲ್ಲಿ ಯೋಜಿತ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು.

ಈ) ಧಾನ್ಯ ವರ್ತಕರ ಸಂಘವು ಕೆಲವು ಸೌಲಭ್ಯಗಳನ್ನು ಒದಗಿಸಲು ಕೋರಿರುತ್ತದೆ. ಅವುಗಳನಲ್ಲಿ ಪಶುವೈದ್ಯ ಶಾಲೆ, ಸಾರ್ವಜನಿಕ ಆಸ್ಪತ್ರೆ, ಪ್ರಾಂಗಣದ ಮುಂದಿನ ರಾಷ್ಟ್ರೀಯ ಹೆದ್ದಾರಿಯನ್ನು ಜೋಡಿ ರಸ್ತೆಯನ್ನಾಗಿ ಮಾರ್ಪಡಿಸುವುದು ಮುಂತಾದ ಬೇಡಿಕೆಗಳಿದ್ದು ಇವುಗಳ ಬಗ್ಗೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ.

ಉ) ವ್ಯಾಪಾರ ವಹಿವಾಟು ಸ್ಥಳಾಂತರ ಸಂಬಂಧ ದಿನಾಂಕ: 2-4-2002ರಂದು ನಡೆದ ಸಭೆಯಲ್ಲಿ ಸಮಿತಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ನೀಡಿರುವ ಸೂಚನೆಗಳನ್ನು ಸಮಿತಿ ಪಾಲಿಸಿದೆ. ವರ್ತಕರು ತಮ್ಮ ನಿವೇಶನಗಳ ಮೇಲೆ ಗೋದಾಮು ನಿರ್ಮಾಣ ಕೈಗೊಂಡಿರುವ ಕುರಿತು ಪರಿವೀಕ್ಷಣೆ ನಡೆಸಲಾಗಿದೆ. ನಿಗಧಿತ ಕಾಲಾವಕಾಶದ ಅವಧಿಯಲ್ಲಿ ಪೂರ್ಣ ವ್ಯಾಪಾರ ಸ್ಥಳಾಂತರಕ್ಕೆ ಅವಶ್ಯ ಕ್ರಮ ಜರುಗಿಸಲಾಗುತ್ತಿದೆ.